ನಾಂದಿಪದ ನಾಂದಿಪದ

# ಕ್ರಿಯಾಶೀಲತೆಯ ಹಿಂದೆ...

**ಯಾ**ವುದೇ ಕೃತಿಯ ಸೃಷ್ಟಿಕ್ರಿಯೆಯ ಹಿಂದೆ ಕಸುಬುದಾರಿಕೆ, ಅಪಾರವಾದ ಶ್ರಮ ಇರುತ್ತದೆ. ಅದು ಸಾಹಿತ್ಯ, ಸಿನಿಮಾ, ಸಂಗೀತ, ನೃತ್ಯ ಯಾವುದೂ ಇರಬಹುದು. ಲಲಿತ ಕಲೆಗಳಿಗೆ ಮಾತ್ರ ಅದು ಸೀಮಿತವಲ್ಲ. ಬಡಗಿ ತಯಾರಿಸುವ ಮೇಜು, ಕುರ್ಚಿ, ಅಕ್ಕಸಾಲಿಗನ ಆಭರಣ ತಯಾರಿಕೆಯ ಹಿಂದೆಯೂ ಈ ಕಸುಬುದಾರಿಕೆ ಇದೆ. ನಮ್ಮ ಅನೇಕ ಸಾಹಿತಿಗಳು ಇದನ್ನು ಕಲಿಯದೆ ಸುಮಾರಾದ ಕೃತಿಗಳನ್ನು ಓದುಗರೆದುರಿಗೆ ಇಡುತ್ತಲೇ ಬಂದಿದ್ದಾರೆ.

ಸಿನಿಮಾದಂತಹ ಹತ್ತಾರು ಜನರೊಂದಿಗೆ ಮಾಡುವ ಕೆಲಸವೂ ತಕ್ಕ ಸಿದ್ಧತೆ, ಕಸುಬುದಾರಿಕೆ ಇಲ್ಲದೆ ಆಗುವುದಿಲ್ಲ. ಉತ್ತಮ ಕತೆ, ತಾಂತ್ರಿಕ ಪರಿಣತಿ ಇದ್ದೂ ಅನೇಕ ಸಿನಿಮಾಗಳು ಕಸುಬುದಾರಿಕೆಯ ಕೊರತೆಯಿಂದ ಜನರನ್ನು ಮುಟ್ಟದ ಉದಾಹರಣೆಗಳು ನಮ್ಮ ಕಣ್ಣಮುಂದೇ ಇವೆ. ತಮ್ಮ ಕ್ರಿಯಾಶೀಲತೆಯ ಹಿಂದಿನ ಸಿದ್ಧತೆ, ಕಸುಬುದಾರಿಕೆಯ ಬಗ್ಗೆ ನಮ್ಮ ಕಾಲದ ಪ್ರತಿಭಾವಂತ ಸಿನಿಮಾ ನಿರ್ದೇಶಕ ಗಿರೀಶ ಕಾಸರವಳ್ಳಿ ಹಾಗೂ ಕತೆ, ಕಾದಂಬರಿಕಾರ ಗೋಪಾಲಕೃಷ್ಣ ಪೈ ಈ ಬಾರಿಯ 'ಮಾತು–ಕತೆ'ಯಲ್ಲಿ ಚರ್ಚಿಸಿದ್ದಾರೆ. ಇದನ್ನು ಮೀರಿಯೂ ಅವರ ಸಂವಾದ ಹಲವು ದಿಕ್ಕಿನ ಹೊಸನೋಟ, ಹೊಳಹುಗಳನ್ನು ಓದುಗರಿಗೆ ಕೊಡಬಲ್ಲದು.

ಸಾಹಿತ್ಯದ ವಿಶಿಷ್ಟ ಅಂದ ಮತ್ತು ಗಂಧವನ್ನು 'ಮಯೂರ' ಸತತವಾಗಿ ಓದುಗರಿಗೆ ಪರಿಚಯಿಸುತ್ತ ಬಂದಿದೆ. ಈ ಸಂಚಿಕೆಯಲ್ಲೂ ವೈವಿಧ್ಯಮಯ ಬರಹಗಳಿವೆ. ಅಚ್ಚರಿದಾಯಕ ಕತೆಗಳು, ಪುಸ್ತಕ ವಿಮರ್ಶೆ, ಲಘುಬರಹಗಳನ್ನು ಕೊಡಲಾಗಿದೆ. ಜನಪ್ರಿಯ ಕಾದಂಬರಿಕಾರ ಕೆ.ಎನ್. ಗಣೇಶಯ್ಯ ಅವರ ನೀಳ್ಗತೆ 'ಆರ್ಯವೀರ್ಯ'ದ ಮೊದಲ ಕಂತು ಈ ಸಂಚಿಕೆಯಲ್ಲಿದೆ.

★

ಅತಿ ಸಣ್ಣಕತೆಗಳ ವಿಶೇಷವಾಗಿರುವ ಮಾರ್ಚ್ ಸಂಚಿಕೆಗೆ ಓದುಗರು ತೋರಿದ ಪ್ರತಿಕ್ರಿಯೆ ಉತ್ಸಾಹ ಭರಿತವಾಗಿತ್ತು. ಈ ಸಂಚಿಕೆಯನ್ನು ಸ್ವಾಗತಿಸಿದ ರೀತಿ ಉತ್ತಮ ಪ್ರಯೋಗಗಳನ್ನು ಬೇಗನೆ ಗುರುತಿಸುವ, ಸ್ವೀಕರಿಸುವ ಕನ್ನಡಿಗರ ಗುಣಪಕ್ಷಪಾತವನ್ನು ತೋರುತ್ತದೆ. ಇಂತಹ ಹೊಸ ಪ್ರಯೋಗಗಳಿಗೆ 'ಮಯೂರ'ದ ಮುಂದಿನ ಸಂಚಿಕೆಗಳು ವೇದಿಕೆಯಾಗಲಿವೆ.

**ಸಂದೀಪ ನಾಯಕ**

